**ಎಂ.ವಿ.ಸಿ. ನಂ. 495/2022 ಪಿ.ಡಬ್ಲ್ಯೂ: 1**

ದಿನಾಂಕ: **22.11.2024** ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.

ಮುಂದುವರೆದ ಮುಖ್ಯ ವಿಚಾರಣೆ : ಅರ್ಜಿದಾರರ ಪರ ವಕೀಲರಿಂದಃ

ಚಾರ್ಜಶೀಟ್ ನಮೂನೆಯನ್ನು ನಿಪಿ**1** ಎಂದು, ಪಂಚನಾಮೆಯನ್ನು ನಿಪಿ**2** ಎಂದು, ಐಎಂವಿ ವರದಿಯನ್ನು ನಿಪಿ**3** ಎಂದು, ಶವ ತನಿಖಾ ವರದಿಯನ್ನು ನಿಪಿ**4** ಎಂದು ಗುರುತಿಸಿತು.

ಪಾಟೀ ಸವಾಲು : ಎದುರುದಾರರ ಪರ ಶ್ರೀ ಎ. ಎಸ್.ಜೆ. ವಕೀಲರಿಂದಃ

02. ನನ್ನ ಪ್ರಮಾಣ ಪತ್ರದಲ್ಲಿ ಬರೆದಿರುವ ಸಂಗತಿಗಳು ನನಗೆ ಗೊತ್ತಿವೆ ಅದನ್ನು ತಯಾರಿಸಲು ಮಾಹಿತಿಯನ್ನು ನಾನೇ ಕೊಟ್ಟಿದ್ದೆ. ಅಪಘಾತದಲ್ಲಿ ಮೃತಪಟ್ಟ ನಾಗಮ್ಮ ನನಗೆ ಅಜ್ಜಿಯಾಗಬೇಕು. ಆಕೆ ನನಗೆ ಅಜ್ಜಿಯಾಗಬೇಕು ಎಂದು ದೃಢಪಡಿಸುವ ವಂಶವೃಕ್ಷವನ್ನು ನಾನು ಹಾಜರು ಮಾಡಿಲ್ಲ. ಮೃತ ನಾಗಮ್ಮ ವ್ಯವಸಾಯ ಮಾಡುತ್ತಿದ್ದರು. ಅವರಿಗೆ ಎಷ್ಟು ಆದಾಯವಿತ್ತು ಎಂಬ ಬಗ್ಗೆ ದಾಖಲೆಯನ್ನು ಹಾಜರು ಮಾಡಿಲ್ಲ. ಮೃತಳ ಮರಣ ಪರಿಹಾರಕ್ಕಾಗಿ ಈ ಅರ್ಜಿ ಬಿಟ್ಟು ಬೇರೆ ಅರ್ಜಿಯನ್ನು ನಾನು ಸಲ್ಲಿಸಿಲ್ಲ. ಅಪಘಾತವು ದಿನಾಂಕ 23.12.2005 ರಂದು ಉಂಟಾಗಿದ್ದು ನಾನು ಪರಿಹಾರಕ್ಕಾಗಿ ಈ ಅರ್ಜಿಯನ್ನು ದಿನಾಂಕ 22.06.2022 ರಂದು ಸಲ್ಲಿಸಿದ್ದು ಸುಮಾರು 17 ವರ್ಷಗಳ ನಂತರ ಸಲ್ಲಿಸಿರುವ ಈ ಅರ್ಜಿಯು ಕಾಲಪರಿಮಿತಿಗೆ ಒಳಪಟ್ಟಿರುವುದರಿಂದ ಊರ್ಜಿತವಾಗುವುದಿಲ್ಲ ಎಂದರೆ ಸರಿಯಲ್ಲ. 17 ವರ್ಷಗಳ ಕಾಲ ವಿಳಂಬ ಮಾಡಿ ಯಾಕೆ ಅರ್ಜಿ ಸಲ್ಲಿಸಿದ್ದೀರಿ? ಎಂದರೆ ಸಾಕ್ಷಿಯು ವಕೀಲರಿಗೆ ಅರ್ಜಿ ಸಲ್ಲಿಸಲು ಕೊಟ್ಟಿದ್ದೆ ಎನ್ನುತ್ತಾರೆ. ಮೃತಳಿಗೆ ಮಾಸಿಕ ರೂ. 15 ಸಾವಿರ ಆದಾಯವಿತ್ತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅರ್ಜಿಯಲ್ಲಿ ಆಕೆ ಕೂಲಿ ಕೆಲಸ ಮಾಡುತ್ತಿದ್ದಳು ಎಂದು ಬರೆಸಿದ್ದೇನೆ ಎಂದರೆ ಸರಿ. 2005 ರಲ್ಲಿ ದಿನಗೂಲಿ ಮೊತ್ತ ಕೇವಲ 50 ರೂಪಾಯಿ ಇತ್ತು ಎಂದರೆ ಇಲ್ಲ, ಆಗ ರೂ. 100 ರಿಂದ 150 ದಿನಗೂಲಿ ನೀಡುತ್ತಿದ್ದರು. ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮೃತಳ ವಯಸ್ಸು ಎಷ್ಟಿತ್ತು ಎಂಬ ಬಗ್ಗೆ ಯಾವುದೇ ದಾಖಲೆಯನ್ನು ಹಾಜರು ಮಾಡಿಲ್ಲ ಎಂದರೆ ತೀರಿಕೊಳ್ಳುವಾಗ 48 ರಿಂದ 50 ವರ್ಷ ವಯಸ್ಸಾಗಿತ್ತು. ಎದುರುದಾರರ ತಪ್ಪಿನಿಂದ ಅಪಘಾತವಾಗಿಲ್ಲವಾದ್ದರಿಂದ ಅವರು ಪರಿಹಾರ ನೀಡಲು ಬಾಧ್ಯಸ್ಥರಲ್ಲ ಎಂದರೆ ಸರಿಯಲ್ಲ. ನಾನು ಮತ್ತು 1 ನೇ ಅರ್ಜಿದಾರರು ಶಾಮೀಲಾಗಿ ಸುಳ್ಳು ಪರಿಹಾರದ ಅರ್ಜಿ ಸಲ್ಲಿಸಿದ್ದೇವೆ ಎಂದರೆ ಸರಿಯಲ್ಲ.

ಮರು ವಿಚಾರಣೆ: ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಗಣಕೀಕರಿಸಿದೆ)

ಓ.ಹೇ.ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಹೂವಿನ ಹಡಗಲಿ.